

# ದೀಪಿಕಾ ದಾಖಲೆ

ದೀಪಿಕಾ ಮತ್ತು ರಣ್‌ವೀರ್ ಮದುವೆಯ ಸಿದ್ಧತೆಗಳು ಸದ್ದಿಲ್ಲದೆ ನಡೆಯುತ್ತಿವೆಯಂತೆ. ಬಹುತೇಕ ನವೆಂಬರ್‌ನಲ್ಲಿ ಮದುವೆ ನಡೆಯೋದು ಖಚಿತ ಎನ್ನುತ್ತಿವೆ ಮೂಲಗಳು. ಆದರೆ ಮದುವೆ ನಡೆಯುವುದು ಉದಯಪುರದಲ್ಲಾ ಅಥವಾ ಇಟಲಿಯಲ್ಲಾ ಎನ್ನುವುದು ಇನ್ನೂ ಖಚಿತವಾಗಿಲ್ಲ.

ಕಳೆದ ವಾರ ರಣ್‌ವೀರ್‌ನ ಬರ್ತ್‌ಡೇ. ದೀಪಿಕಾ ತನ್ನ ಇನ್‌ಸ್ಟಾಗ್ರಾಂ ಖಾತೆಯಲ್ಲಿ 'ಹೇಯ್ ಹಾಟ್ಟೀ... ಇಟ್ಸ್ ಯುವರ್ ಬರ್ತ್‌ಡೇ' ಎಂಬ ಟಿಪ್ಪಣಿಯೊಂದಿಗೆ ಜೂಕ್‌ಬಾಕ್ಸ್ ಒಂದರ ಮುಂದೆ ತಾನು ನೃತ್ಯ ಮಾಡುವ ವೀಡಿಯೊ ಒಂದನ್ನು ಹಾಕಿ ರಣ್‌ವೀರ್‌ಗೆ ಕಳಿಸಿದ್ದಾಳೆ.

ಅಂದ ಹಾಗೆ, ಸಾಮಾಜಿಕ ಜಾಲತಾಣದಲ್ಲಿ ಅತ್ಯಂತ ಹೆಚ್ಚು ಹಿಂಬಾಲಕರು ಇರುವ ಏಷ್ಯನ್ ಮಹಿಳೆ ಎನ್ನುವುದು ಈಗ ದೀಪಿಕಾಳ ಹೆಗ್ಗಳಿಕೆ. ಇನ್‌ಸ್ಟಾಗ್ರಾಂನಲ್ಲಿ ಆಕೆಯ ಹಿಂಬಾಲಕರ ಸಂಖ್ಯೆ 2.5 ಕೋಟಿಗೆ ಏರಿದೆ. ವರ್ಷದ ಆರಂಭದಲ್ಲಿ ಆಕೆ ನಟಿಸಿದ 'ಪದ್ಮಾವತಿ' ತಂದಿತ್ತ ಅಪಾರ ಜನಪ್ರಿಯತೆ ಈ ಏರಿಕೆಗೆ ಕಾರಣವಂತೆ. ಈ ಚಿತ್ರದಲ್ಲಿ ದೀಪಿಕಾಳ ರಾಣಿ ಪದ್ಮಿನಿಯ ಪಾತ್ರದ ನಟನೆ ಕೂಡಾ ವಿಮರ್ಶಕರ ಮೆಚ್ಚುಗೆ ಗಳಿಸಿದೆ. ಚಿತ್ರದ ಗಳಿಕೆ 300 ಕೋಟಿ ರೂಪಾಯಿ ದಾಟಿದ್ದು, ಹೀರೋಯಿನ್ ಪ್ರಧಾನ ಚಿತ್ರವೊಂದು 300 ಕೋಟಿ ರೂಪಾಯಿ ಗಳಿಸಿದ್ದು ಇದೇ ಮೊದಲು ಎಂದು ಬಾಲಿವುಡ್ ಕೊಂಡಾಡುತ್ತಿದೆ.



# ವರುಣ್ ಜನಪ್ರಿಯತೆ

ಬಾಲಿವುಡ್‌ನಲ್ಲಿ ಅತ್ಯಂತ ಲವಲವಿಕೆಯಿಂದ ಕಾಣಿಸಿಕೊಳ್ಳುವ ಯುವ ಹೀರೋ ವರುಣ್ ಧವನ್, ನಿರ್ಮಾಪಕರಿಗೆ ಮಾತ್ರವಲ್ಲ, ನಟಿಯರಿಗೂ ಅಚ್ಚುಮೆಚ್ಚು. ಜತೆಗೆ ಪ್ರೇಕ್ಷಕರ ಜತೆಗೆ ಈತನ ಒಡನಾಟವೂ ಹೆಚ್ಚು. ಚಿತ್ರಗಳ ಪ್ರಮೋಷನ್, ಸ್ಟಾರ್ ಇವೆಂಟ್‌ಗಳಲ್ಲಿ ಕಾಣಿಸಿಕೊಳ್ಳುವುದರಲ್ಲಿ ವರುಣ್ ಸದಾ ಮುಂದು. ಲೈವ್ ಪ್ರೋಗ್ರಾಂಗಳಲ್ಲಿ ಪ್ರೇಕ್ಷಕರನ್ನು ಅತ್ಯಂತ ಹೆಚ್ಚು ರಂಜಿಸುವ ವರುಣ್, ಆ ಕಾರಣಕ್ಕಾಗಿಯೇ ಅತ್ಯಧಿಕ ಸಂಭಾವನೆಯನ್ನು ಪಡೆಯುತ್ತಾನೆ. ಬಾಲಿವುಡ್‌ನಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಅತ್ಯಧಿಕ ಹಿಂಬಾಲಕರನ್ನು ಹೊಂದಿರುವ ಕೀರ್ತಿಯೂ ಆತನದ್ದು. ಇವೆಲ್ಲ ಒಟ್ಟಾಗಿ ಬಾಕ್ಸಾಫೀಸ್‌ನಲ್ಲಿ ಈತನ ಚಿತ್ರಗಳ ಗಳಿಕೆಯೂ ಸದಾ ಅತ್ಯುತ್ತಮವಾಗಿಯೇ ಇದೆ.

'ಕಳಂಕ್' ಚಿತ್ರದಲ್ಲಿ ಹೀರೋ ವರುಣ್ ಧವನ್ ಮತ್ತು ಹೀರೋಯಿನ್ ಶೂಟಿಂಗ್ ವೇಳೆ ಗಾಯಗೊಂಡದ್ದು ಹಳೆಯ ಸುದ್ದಿ. ಅದರ ಬೆನ್ನಲ್ಲೇ ಈಗ ಇನ್ನೊಬ್ಬ ನಟ ಆದಿತ್ಯ ರಾಯ್ ಕಪೂರ್ ಕೂಡಾ ಬಿದ್ದು ಗಾಯಗೊಂಡಿದ್ದಾನೆ. ಇದರಿಂದಾಗಿ ಚಿತ್ರದ ಶೂಟಿಂಗ್ ಒಂದು ವಾರ ಮುಂದಕ್ಕೆ ಹೋಗಿದೆ. ಸಂಜಯ್ ದತ್, ಸೋನಾಕ್ಷಿ ಸಿನ್ಹಾ ಮತ್ತು ಮಾಧುರಿ ದೀಕ್ಷಿತ್ ಮುಂತಾದ ಘಟಾನುಘಟಿಗಳೆಲ್ಲ ಇರುವ ಸಿನಿಮಾವಿದು. ಈ ಹಿಂದೆ ಶ್ರೀದೇವಿ ಒಪ್ಪಿಕೊಂಡಿದ್ದ ಪಾತ್ರವನ್ನು ಆಕೆಯ ನಿಧನದ ನಂತರ ಮಾಧುರಿ ಒಪ್ಪಿಕೊಂಡಿದ್ದಾಳೆ.

ಮುಂಬೈಯ ಫಿಲಂ ಸಿಟಿಯಲ್ಲಿ ನಡೆಯುತ್ತಿರುವ ಶೂಟಿಂಗ್‌ಗೆ ಧಾರಾಕಾರ ಮಳೆಯ ಕಾಟವೇ ವಿಪರೀತವಾಗಿದೆ. ಆ್ಯಕ್ಷನ್ ದೃಶ್ಯವೊಂದರಲ್ಲಿ ಆದಿತ್ಯ ರಾಯ್ ಜಾರಿ ಬಿದ್ದು ಆಸ್ಪತ್ರೆ ಸೇರಿದ್ದಾನೆ. ಫಿಲಂ ಸಿಟಿಯಲ್ಲಿ ನಿರ್ಮಾಪಕ ಕರಣ್ ಜೋಹರ್ ಈ ಚಿತ್ರಕ್ಕಾಗಿ 15 ಕೋಟಿ ರೂಪಾಯಿ ವೆಚ್ಚ ಮಾಡಿ ಸೆಟ್ ನಿರ್ಮಿಸಿದ್ದು ಈಗಾಗಲೆ ದೊಡ್ಡ ಸುದ್ದಿಯಾಗಿದೆ. ಎಲ್ಲ ಸರಿಯಾಗಿ ಮುಗಿದರೆ ಈ ಚಿತ್ರ 2019ರ ಏಪ್ರಿಲ್‌ನಲ್ಲಿ ತೆರೆಗೆ ಬರಲಿದೆ.